ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

ಸಿ.ಸಿ. ಸಂಖ್ಯೆ: 196/2020

ಫಿರ್ಯಾದುದಾರರು : ಶ್ರೀ ದಿನೇಶಾಚಾರಿ
ಬಿನ್ ನರಸಿಂಹಾಚಾರಿ
ವಯಸ್ಸು ಸುಮಾರು 36 ವರ್ಷ,
ವಾಸ: ಮನೆ ಸಂ: 111,
ಜನತಾ ಕಾಲೋನಿ,
ಬಿಳಿಕೆರೆ ಗ್ರಾಮ ಮತ್ತು ಅಂಚೆ
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : ಶ್ರೀ ಸುನೀಲ್ ಬಿ.ಎಸ್.
ಬಿನ್ ಶಿವಣ್ಣಶೆಟ್ಟಿ
ವಾಸ: ನಂ.77, 3 ನೇ ಹಂತ,
ಕುವೆಂಪುನಗರ, ಮೈಸೂರು.

ಮಾಲೀಕರು:
ಸುಪ್ರೀಮ್ ಉಡ್ ಪ್ಲೇನಿಂಗ್ ಸೆಂಟರ್
ಹಿನಕಲ್, ಮೈಸೂರು.

ಆಪಾದನೆ

ಆರೋಪಿಯಾದ ನೀವು ದಿನಾಂಕ: 10.04.2012 ರಂದು ಫಿರ್ಯಾದುದಾರರಿಂದ ನಿಮ್ಮ ಕಾನೂನು ಬದ್ಧ ಅವಶ್ಯಕತೆಗಾಗಿ ರೂ.4,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು 06-06-2013 ರ ದಿನಾಂಕ ಇರುವ ರೂ.4,00,000/- ದ ಆಂದ್ರ ಬ್ಯಾಂಕ್, ಹಿನಕಲ್ ಶಾಖೆ, ಮೈಸೂರು ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ - 524220 ಅನ್ನು ಸುಪ್ರೀಮ್ ಉಡ್ ಪ್ಲೇನಿಂಗ್ ಸೆಂಟರ್, ಹಿನಕಲ್ ರವರ ಪರವಾಗಿ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ಬಿಳಿಕೆರೆ ಶಾಖೆ ಇಲ್ಲಿಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds Insufficient"** ಎಂಬ ಹಿಂಬರಹದೊಂದಿಗೆ ದಿ: 12-06-2013 ರಂದು ವಾಪಾಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿ: 27.08.2013 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ

ದಿಃ 28.08.2013 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **07.02.2024**

(ಪೂಜಾ ಬೆಳಕೇರಿ )
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಡಾಧಿಕಾರಿಗಳು, ಹುಣಸೂರು.